**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**C.C. - 35-24** **ಪಿಡಬ್ಲ್ಯೂ ಃ** **<u>11</u>**

**ಸಿಡಬ್ಲ್ಯೂ ಃ** **<u>15</u>**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಡಾಃ ಆದಮ ಅಲಿ ನದಾಫ |
| ತಂದೆ ಹೆಸರು | ಃ | ಅಲ್ಲಾಸಾಬ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ವೈದ್ಯರು |
| ವಾಸಸ್ಥಳ | ಃ | ಕಿಮ್ಸ ಆಸ್ಪತ್ರೆ, ಹುಬ್ಬಳ್ಳಿ |

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 08.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು 2008 ರಿಂದ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಯಲ್ಲಿ ವೈದ್ಯನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿಃ 12.11.2023 ರಂದು ಪೋಲಿಸ ಇನ್ಸಪೆಕ್ಟರ ಪೂರ್ವ ಸಂಚಾರಿ ಪೋಲಿಸ ಠಾಣೆ ರವರ ವಿನಂತಿ ಮೇರೆಗೆ ಮೃತ ಗರೀಬಪ್ಪ ತಂದೆಃ ದುರ್ಗಪ್ಪ ಹರಿಜನ, ವಯಾಃ 62 ಇವರ ಮರಣೋತ್ತರ ಪರೀಕ್ಷೆಯನ್ನು ಸಮಯ 12.30 ರಿಂದ 1.30 ಗಂಟೆವರೆಗೆ ಮಾಡಿದ್ದು, ನನ್ನ ಅಭಿಪ್ರಾಯದಲ್ಲಿ ಸದರಿ ಮರಣವು ಶ್ವಾಸಕೋಶಗಳಿಗೆ ಸೋಂಕು ತಗುಲಿ ಮರಣ ಸಂಭವಿಸಿರುತ್ತದೆ. ಈ ಕುರಿತು ನಾನು ವರದಿ ನೀಡಿದ್ದು, ಸದರಿ ವರದಿಯನ್ನು ನಿಪಿ.26 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿ ನಿಪಿ.26-ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರಾಗಿರುವುದರಿಂದ ಅವರ ಪರವಾಗಿ ಪಾಟಿ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**

**C.C. - 35-24** **ಪಿಡಬ್ಲ್ಯೂ ಃ 12**

**ಸಿಡಬ್ಲ್ಯೂ ಃ 7**

ಸಾಕ್ಷಿದಾರರ ಹೆಸರು ಃ ಸಹದೇವಪ್ಪ ತುಮ್ಮಣ್ಣವರ

ತಂದೆ ಹೆಸರು ಃ ದೇವಪ್ಪ

ವಯಸ್ಸು ಃ 29 ವರ್ಷ

ಉದ್ಯೋಗ ಃ ಖಾಸಗಿ ಕೆಲಸ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 08.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಅಂದಾಜು 2 ವರ್ಷಗಳ ಹಿಂದೆ ಮನೋಜ ಪಾರ್ಕ ಕ್ರಾಸ ಬಳಿ ಅಪಘಾತ ವಾಗಿತ್ತು. ಆಗ ಸಮಯ 8.40 ಗಂಟೆಯಾಗಿರಬಹುದು. ವಯಸ್ಸಾದ ವ್ಯಕ್ತಿಗೆ ಆಟೋ ದಿಂದ ಅಪಘಾತ ವಾಗಿತ್ತು. ಸದರಿ ಆಟೋ ನಂಬರ ಗೊತ್ತಿಲ್ಲ. ನಾನು ನ್ಯಾಯಾಲಯದ ಮುಂದಿರುವ ಆರೋಪಿ ನೋಡಿಲ್ಲ. ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ. ಸಾಕ್ಷಿ ನಿಪಿ.4 ಹಾಗೂ 5 ರಲ್ಲಿ ತನ್ನ ಭಾವ ಚಿತ್ರ ನೋಡಿ ಗುರುತಿಸಿದ್ದಾರೆ. ಸದರಿ ಪೊಟೋಗಳನ್ನು ಮರುದಿನ ಅಪಘಾತ ದ ಸ್ಥಳದಲ್ಲಿ ತೆಗೆದಿದ್ದಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದರು, ಅವರ ಮನವಿಯನ್ನು ಪರಿಗಣಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 02.11.2023 ರಂದು ರಾತ್ರಿ 9 ಗಂಟೆಗೆ ನಾನು ನನ್ನ ಬೈಕನ್ನು ಚಲಾಯಿಸಿಕೊಂಡು ರಮೇಶ ಭವನದ ಮೂಲಕ ಸುಳ್ಳ ರೋಡ ಹಿಡಿದುಕೊಂಡು ಮನೋಜ ಕ್ರಾಸ ಬಳಿ ಇರುವ ಚಹಾದ ಅಂಗಡಿ ಕಡೆಯಿಂದ ಬಸವೇಶ್ವರ ಪಾರ್ಕ ಕಡೆಗೆ ಒಬ್ಬ ವ್ಯಕ್ತಿಯೂ ನಡೆದುಕೊಂಡು ರೋಡ ದಾಟುತ್ತಿದ್ದಾಗ ಆಟೋ ನಂಃ ಕೆಎ-63 /0933 ನೇದ್ದರ ಚಾಲಕ ನ್ಯಾಯಾಲಯದ ಮುಂದಿರುವ ಆರೋಪಿ ಆಟೋವನ್ನು ಸುಳ್ಳ ಕಡೆಯಿಂದ ಮನೋಜ ಪಾರ್ಕ ದಿಂದ ಅತಿ ವೇಗದಿಂದ ಚಲಾಯಿಸಿಕೊಂಡು ಬಂದವನೇ ವೇಗ ನಿಯಂತಿಸಲಾಗದೇ , ಪಾದಚಾರಿಗೆ ಡಿಕ್ಕಿಪಡಿಸಿದನು ಅಂದರೆ ಸರಿಯಲ್ಲ.

ಸದರಿ ಗಾಯಾಳುವನ್ನು ಹತ್ತಿರ ಹೋಗಿ ನೋಡಲಾಗಿ ತಲೆಗೆ ಹಾಗೂ ಮೈಕೈ ಗೂ ಗಾಯಗಳಿದ್ದು ಆತ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಸದರಿ ಆಟೋ ಚಾಲಕ ವಿಜಯಕುಮಾರ ಕಾಶೀಗರಿ ಎಂದು ಗೊತ್ತಾಯಿತು ಅಂದರೆ ಸರಿಯಲ್ಲ. ಗಾಯಾಳುವಿನ ಹೆಸರು ಗರೀಬಪ್ಪ ಹರಿಜನ ಸಾಃ ಶಿಶುವಿನಹಳ್ಳಿ ಎಂದು ಗೊತ್ತಾಯಿತು ಅಂದರೆ ಸರಿಯಲ್ಲ. ಗರೀಬಪ್ಪನ ಹೆಡಂತಿ ಬಸವಣ್ಣೆವ್ವ ಹಾಗೂ ನಾವೆಲ್ಲ ಕೂಡಿಕೊಂಡು ಅಪಘಾತ ಪಡಿಸಿದ ಆಟೋದಲ್ಲಿ ಕಿಮ್ಸ ಆಸ್ಪತ್ರೆಗೆ ಚಿಕಿತ್ಸೆಗೆ ಕಳಿಸಿಕೊಟ್ಟೆವು. ನಾನು ಈ ಕುರಿತು ದಿಃ 4.11.2023 ರಂದು ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.27 ಎಂದು ಗುರುತಿಸಲಾಯಿತು. ಅದೇ ದಿನ ನಾನು ತೋರಿಸಿದ ಸ್ಥಳದಲ್ಲಿ ಪೋಲಿಸರು ಮಃ 1.30 ರಿಂದ 2.30 ಗಂಟೆವರೆಗೆ ಸ್ಥಳ ಪಂಚನಾಮೆ ಮಾಡಿದ್ದಾರೆ ಅಂದರೆ ಸರಿಯಲ್ಲ. ದಿಃ 12.11.2023 ರಂದು ಗಾಯಾಳು ಮೃತ ಪಟ್ಟ ಬಗ್ಗೆ ಪುನಃ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಭಾಗವನ್ನು ನಿಪಿ.28 ಎಂದು ಗುರುತಿಸಲಾಯಿತು. ಸದರಿ ನಿಪಿಚಿ.3, 27 ಹಾಗೂ 28 ಗಳು ವಿಷಯಗಳು ಗೊತ್ತಿದ್ದರೂ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಏನೂ ಇಲ್ಲ.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.